ಒ ಎಸ್ ನಂ:**24/2023**

**ಪಿಡಬ್ಲ್ಯೂ:** 1

ಪ್ರಮಾಣ ವಚನ ಭೋದಿಸಿದ ದಿನಾಂಕ:**15.04.2026**

ಮುಂದುವರಿದ **ಮುಖ್ಯ ವಿಚಾರಣೆ:** ವಾದಿ ಪರ **ವಕೀಲರಿಂದ:**

**ನಾನು ದಿ.**8-9-2021 **ರ ನೊಂದಾಯಿತವಲ್ಲದ ಕ್ರಯಪತ್ರ, ಸರ್ವೆ ನಂ.**9/1 **ಕ್ಕೆ ಸಂಬಂಧಿಸಿದ ಆರ್ ಟಿ ಸಿ ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-**1 **ಮತ್ತು** 2 **ಎಂದು ಗುರುತಿಸಲಾಯಿತು.**

ನಿಪಿ-**1** ರಲ್ಲಿ ಕಾಣುವ ನನ್ನ ಹಾಗೂ ಅದರಲ್ಲಿ ನಮೂದಿಸಿರುವ ವ್ಯಕ್ತಿಗಳ ಸಹಿಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನಿಪಿ-**1** ರಲ್ಲಿನ ತಮ್ಮ ಸಹಿಯನ್ನು ಹಾಗೂ ಡೀಕಮ್ಮ, ಜಯಶ್ರೀ, ಮೋಹಿನಿ, ರಾಜೇಶ್ವರಿ, ನಯಶ್ರೀ, ಕೀರ್ತಿ, ಪವನ್ ರವರುಗಳ ಸಹಿಗಳನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಮತ್ತು ಪ್ರತಿವಾದಿಗಳ ಸಹಿಗಳನ್ನು ನಿಪಿ-**1**ಎ, **1**ಬಿ, **1**ಸಿ, **1**ಡಿ, **1**ಇ, **1**ಎಫ್, **1**ಜಿ ಹಾಗೂ **1** ಹೆಚ್ ಎಂದು ಗುರುತಿಸಲಾಯಿತು.

ನಿಪಿ-**1** ರ ಪ್ರತೀ ಪುಟಗಳಲ್ಲಿ ನಾನು ಮತ್ತು ಪ್ರತಿವಾದಿಗಳು ಸಹಿಗಳನ್ನು ಮಾಡಿರುತ್ತೇವೆ. ನಿಪಿ-**1** ಕ್ಕೆ ಸಾಕ್ಷಿಗಳಾಗಿ ವಸಂತ ಹಾಗೂ ಶಿವಪ್ರಸಾದ್ ರವರು ಸಹಿ ಮಾಡಿರುತ್ತಾರೆ. ಸಾಕ್ಷಿ ವಸಂತ ಹಾಗೂ ಶಿವಪ್ರಸಾದ್ ರವರ ಸಹಿಗಳನ್ನು ನಿಪಿ-**1** ರಲ್ಲಿ ನೋಡಿ ಗುರುತಿಸಿದ್ದು ಅವರ ಸಹಿಗಳನ್ನು ಕ್ರಮವಾಗಿ ನಿಪಿ-**1**ಐ ಹಾಗೂ **1** ಜೆ ಎಂದು ಗುರುತಿಸಲಾಯಿತು.

ಸಾಕ್ಷಿಯು **15.3.2023** ರ ನೋಟೀಸಿನ ಕಚೇರಿ ಪ್ರತಿ, **7** ಅಂಚೆ ರಶೀದಿಗಳು, **6** ಅಂಚೆ ಸ್ವೀಕೃತಿ ಪತ್ರಗಳ, ದಿ.**23-3-23** ರ ಪ್ರತ್ಯುತ್ತರ ನೋಟೀಸ್

ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-**3** ರಿಂದ **17** ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಸಾಕ್ಷಿಯ **ಮುಂದುವರಿದ ಮುಖ್ಯ ವಿಚಾರಣೆಗಾಗಿ ಮಾನ್ಯ ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ನೀಡಲಾಗಿದೆ.**

**(ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ**

1 ನೇ **ಹೆಚ್ಚುವರಿ** ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಮತ್ತು ಪ್ರಥಮ ದರ್ಜೆ ನ್ಯಾಯಿಕದಂಡಾಧಿಕಾರಿ, ಪುತ್ತೂರು